ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]

Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]

Total No. of Questions : 57 ]

**ಸಂಕೇತ ಸಂಖ್ಯೆ : 95-K**

**Code No. : 95-K**

**D**

**CCE PR**
**UNREVISED**
**REDUCED SYLLABUS**
**NSR & NSPR**

Question Paper Serial No. **900**

# ವಿಷಯ : ಸಮಾಜಶಾಸ್ತ್ರ

# Subject : SOCIOLOGY

**(ಕನ್ನಡ ಮಾಧ್ಯಮ / Kannada Medium)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Repeater / NSR & NSPR)**

ದಿನಾಂಕ : 03. 04. 2023 ] [ Date : 03. 04. 2023

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 57 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

[ Turn over

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 10 × 1 = 10**

1. ರಾಷ್ಟ್ರದ ಪ್ರಜೆಗಳು ವಿದ್ಯಾವಂತರಾಗಿದ್ದರೆ

(A) ಆ ರಾಷ್ಟ್ರದ ಅನಕ್ಷರತೆ ಹೆಚ್ಚಾಗುತ್ತದೆ

(B) ಆ ರಾಷ್ಟ್ರದ ಪ್ರಜಾಪ್ರಭುತ್ವ ಫಲಕಾರಿಯಾಗುತ್ತದೆ

(C) ನಿರುದ್ಯೋಗ ಸಮಸ್ಯೆ ಪರಿಹಾರವಾಗುವುದಿಲ್ಲ

(D) ಹಣಕಾಸಿನ ಸಂಸ್ಥೆಯ ಅವಶ್ಯಕತೆ ಇರುವುದಿಲ್ಲ

2. ಅಸ್ಪೃಶ್ಯತೆ ಆಚರಣೆ ಶಾಪವೆಂದು ಸಾರಿದವರು

(A) ಮಹಾತ್ಮಾ ಗಾಂಧಿ

(B) ಬಸವೇಶ್ವರ

(C) ಬಾಬಾ ಸಾಹೇಬ್ ಅಂಬೇಡ್ಕರ್

(D) ರಾಜಾ ರಾಮ್‌ಮೋಹನ್ ರಾಯ್

3. ಭಾರತೀಯ ಸಮಾಜದ ಅವಿಭಾಜ್ಯ ಅಂಗ

(A) ಆರ್ಥಿಕ ಸಮಾನತೆ

(B) ಗಣತಂತ್ರ

(C) ಜಾತ್ಯಾತೀತತೆ

(D) ಜಾತಿ ಪದ್ಧತಿ

4. ಬೌದ್ಧ ಧರ್ಮ ಸ್ಥಾಪಕ

(A) ಗೌತಮ ಬುದ್ಧ

(B) ಗುರುನಾನಕ್

(C) ಮಹಾವೀರ

(D) ಬಸವಣ್ಣ

5. ಭಾರತದ ಮೊದಲ ಶಿಕ್ಷಕಿ

(A) ಸಾವಿತ್ರಿಬಾಯಿ ಫುಲೆ

(B) ನಿವೇದಿತಾ

(C) ಆ್ಯನಿ ಬೆಸೆಂಟ್

(D) ಸರೋಜಿನಿ ನಾಯ್ಡು

6. ಎಸ್.ಎನ್. ಡಿ.ಟಿ. ಮಹಿಳಾ ವಿಶ್ವವಿದ್ಯಾಲಯವನ್ನು ಮಹರ್ಷಿ ಕರ್ವೆರವರು ಸ್ಥಾಪಿಸಿದ್ದು

(A) ಮುಂಬೈನಲ್ಲಿ

(B) ಬರೋಡಾದಲ್ಲಿ

(C) ಗ್ವಾಲಿಯರ್‌ನಲ್ಲಿ

(D) ಪುಣೆಯಲ್ಲಿ

7. ಹೊಂ ರೂಲ್ ಚಳವಳಿಯು 1917 ರಲ್ಲಿ ಮೊದಲಿಗಿಂತ ಹತ್ತರಷ್ಟು ಬಲವಾಗಲು ಕಾರಣ

(A) ಸ್ತ್ರೀಯರು ಭಾಗಿಗಳಾಗಿದ್ದು

(B) ಮಹಾತ್ಮಾ ಗಾಂಧಿ ಸತ್ಯಾಗ್ರಹ ಕೈಗೊಂಡಿದ್ದು

(C) ಬಾಲಗಂಗಾಧರ್ ತಿಲಕ್ ಪತ್ರಿಕೆ ಪ್ರಕಟಿಸಿದ್ದು

(D) ಮೊದಲ ದುಂಡು ಮೇಜಿನ ಸಭೆಯ ವೈಫಲ್ಯ

8. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಬೆಂಬಲ ಸೂಚಿಸಿದ್ದ ಬ್ರಿಟಿಷ್ ವೈಸ್‌ರಾಯ್

(A) ಡಾಲ್‌ಹೌಸಿ

(B) ವಾರನ್ ಹೇಸ್ಟಿಂಗ್ಸ್

(C) ಮೌಂಟ್ ಬ್ಯಾಟನ್

(D) ಕ್ಯಾನಿಂಗ್

9. ಒಂದು ಪ್ರದೇಶದ ಮೂಲ ನಿವಾಸಿಗಳೆ

(A) ಸಮುದಾಯ

(B) ಸಮಾಜ

(C) ಕುಟುಂಬ

(D) ಆದಿವಾಸಿಗಳು

10. ಹರಿಜನರು ಮತ್ತು ಗಿರಿಜನರು ಎಂಬ ಪದಗಳನ್ನು ಮೊದಲು ಬಳಸಿದವರು

(A) ಮೋತಿಲಾಲ್ ನೆಹರೂರವರು

(B) ಬಾಬಾ ಸಾಹೇಬ್ ಅಂಬೇಡ್ಕರ್

(C) ಮಹಾತ್ಮ ಗಾಂಧೀಜಿರವರು

(D) ಬಾಬಾ ಆಮ್ಟೆರವರು

**II.** 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

**5 × 1 = 5**

| ***A*-ಪಟ್ಟಿ** | ***B*-ಪಟ್ಟಿ** |
|---|---|
| (A) ಬ್ರಹ್ಮ ಸಮಾಜ | (i) ದಯಾನಂದ ಸರಸ್ವತಿ |
| (B) ಆರ್ಯ ಸಮಾಜ | (ii) ರಾಜಾ ರಾಮ್‌ಮೋಹನ್ ರಾಯ್ |
| (C) ಸತ್ಯಶೋಧಕ ಸಮಾಜ | (iii) ಆತ್ಮರಾಮ ಪಾಂಡುರಂಗ |
| (D) ರಾಮಕೃಷ್ಣ ಮಿಷನ್ | (iv) ಗುರುನಾನಕ್ |
| (E) ಸಿಖ್ ಧರ್ಮ | (v) ಸ್ವಾಮಿ ವಿವೇಕಾನಂದ |
| | (vi) ಜ್ಯೋತಿಬಾ ಫುಲೆ |
| | (vii) ಮಹಾವೀರ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪದ / ವಾಕ್ಯದಲ್ಲಿ ಉತ್ತರ ಬರೆಯಿರಿ : 15 × 1 = 15**

12. ಕೈಗಾರಿಕೀಕರಣ ಎಂದರೇನು ?

13. ಕಿಂಗ್ಸ್‌ಲೇ ಡೇವಿಡ್ ಪ್ರಕಾರ ಸಾಮಾಜಿಕ ಬದಲಾವಣೆಯನ್ನು ವ್ಯಾಖ್ಯಾನಿಸಿ.

14. ಪಕ್ಕಾ ಆಹಾರ ಎಂದರೇನು ?

15. ಜಾತಿ ಪದದ ಉಗಮವನ್ನು ತಿಳಿಸಿ.

16. ಆಧುನೀಕರಣ ಎಂದರೇನು ?

17. ಕಚ್ಚಾ ಆಹಾರ ಎಂದರೇನು ?

18. ಹರಿಜನ ಪತ್ರಿಕೆಯನ್ನು ಯಾರು ಪ್ರಕಟಿಸಿದರು ?

19. ಸತಿ ಸಹಗಮನ ಎಂದರೇನು ?

20. ಭಾರತದ ಮೊದಲ ಮಹಿಳಾ ರಾಷ್ಟ್ರಪತಿ ಯಾರು ?

21. ಬುಡಕಟ್ಟು ಎಂದರೇನು ?

22. ಗಿಡಮೂಲಿಕೆಯ ಔಷಧಿಗಳ ತಯಾರಿಕೆಯಲ್ಲಿ ಪ್ರಾವೀಣ್ಯತೆಯನ್ನು ಪಡೆದವರು ಯಾರು ?

23. ಬುಡಕಟ್ಟು ಸಮುದಾಯಗಳಲ್ಲಿ ಮಕ್ಕಳು ಶಾಲೆಗ ಹೋಗುವವರ ಸಂಖ್ಯೆ ಕಡಿಮೆ ಏಕೆ ?

24. ಬ್ಲಾಕ್ ಪದ್ಧತಿ ಎಂದರೇನು ?

25. ವಯಸ್ಕರ ಶಿಕ್ಷಣ ಎಂದರೇನು ?

26. ಕೇಸರಿ ಪತ್ರಿಕೆಯನ್ನು ಪ್ರಕಟಿಸಿದವರು ಯಾರು ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**24 × 2 = 48**

27. ಸಾಮಾಜಿಕ ಬದಲಾವಣೆ ತರುವಲ್ಲಿ ಶಿಕ್ಷಣದ ಪಾತ್ರವೇನು ?

28. ಅನಿಯೋಜಿತ ಸಾಮಾಜಿಕ ಬದಲಾವಣೆಯನ್ನು ಉದಾಹರಣೆಗಳೊಂದಿಗೆ ವಿವರಿಸಿ.

29. ಮಾನವ ಸಂಬಂಧ ಬದಲಾವಣೆ ಸಾಮಾಜಿಕ ಬದಲಾವಣೆಯನ್ನು ಹೇಗೆ ತರುತ್ತದೆ ?

30. ಔಪಚಾರಿಕ ಶಿಕ್ಷಣವು ಜನರ ದೃಷ್ಟಿಕೋನ ಬದಲಾವಣೆಗೆ ಹೇಗೆ ಕಾರಣವಾಗುತ್ತದೆ ?

31. ಸಾಮಾಜಿಕ ಬದಲಾವಣೆಯು ವಸ್ತುನಿಷ್ಠ ಕಲ್ಪನೆಯಾಗಿದೆ. ಹೇಗೆ ?

32. ಜಾತಿ ಪದ್ಧತಿಯನ್ನು ಅರ್ಥೈಸಿ.

33. 1975–76 ರಲ್ಲಿ ಭಾರತದ ಯಾವ ನಗರಗಳಲ್ಲಿ ದೂರದರ್ಶನ ಕೇಂದ್ರಗಳನ್ನು ಸ್ಥಾಪಿಸಲಾಯಿತು ?

34. ಊಟೋಪಚಾರದ ಮೇಲಿನ ನಿರ್ಬಂಧಗಳು ಕಡಿಮೆಯಾಗಲು ಕಾರಣಗಳೇನು ?

35. 1856 ರ ಹಿಂದೂ ವಿಧವಾ ಪುನರ್‌ವಿವಾಹ ಕಾಯ್ದೆಯ ಪ್ರಮುಖ ಅಂಶಗಳನ್ನು ತಿಳಿಸಿ.

36. ಬ್ರಿಟಿಷರ ಆಳ್ವಿಕೆಯ ಸಮಯದಲ್ಲಿ ಜಾರಿಗೆ ತರಲಾದ ವಿವಾಹಕ್ಕೆ ಸಂಬಂಧಪಟ್ಟ ಕಾನೂನುಗಳನ್ನು ಹೆಸರಿಸಿ.

37. ಬುಡಕಟ್ಟುಗಳ ಅಭಿವೃದ್ಧಿಗೆ ಭಾರತ ಸರ್ಕಾರ ರೂಪಿಸಿರುವ ಮೂರು ನೀತಿಗಳನ್ನು ಹೆಸರಿಸಿ.

38. ಬುಡಕಟ್ಟು ಸಲಹಾ ಸಮಿತಿಯ ಕಾರ್ಯಗಳೇನು ?

39. ಸಮೂಹ ಮಾಧ್ಯಮದ ಪ್ರಕಾರಗಳನ್ನು ಉದಾಹರಣೆಗಳೊಂದಿಗೆ ತಿಳಿಸಿ.

40. ಆಧುನಿಕ ಜೀವನದಲ್ಲಿ ಗಣಕಯಂತ್ರದ ಉಪಯುಕ್ತತೆಯನ್ನು ತಿಳಿಸಿ.

41. ಸಾಮಾಜಿಕ ಬದಲಾವಣೆಯ ಪ್ರಕಾರಗಳಾವುವು ?

42. ವಿದ್ಯುನ್ಮಾನ ಮಾಧ್ಯಮಕ್ಕೆ ಯಾವುದಾದರೂ ಎರಡು ಉದಾಹರಣೆ ಕೊಡಿ.

43. ಭಾರತೀಯ ಜನಜೀವನದ ಯಾವ ಅಂಶಗಳ ಮೇಲೆ ಜಾತಿಯ ಪ್ರಭಾವಬೀರುತ್ತದೆ ?

44. ಅಸ್ಪೃಶ್ಯತೆಯ ವಿರುದ್ಧ ಅಂಬೇಡ್ಕರರು ಸಂಘಟಿಸಿದ ಚಳವಳಿಗಳನ್ನು ಹೆಸರಿಸಿ.

45. ಅಂತರ್ಜಾಲ (ಇಂಟರ್ನೆಟ್) ಸಾಮಾಜಿಕ ಬದಲಾವಣೆಯನ್ನು ಉಂಟುಮಾಡುತ್ತದೆ. ಹೇಗೆ ?

46. ವೇದಗಳ ಕಾಲದ ಪ್ರಖ್ಯಾತ ಮಹಿಳೆಯರನ್ನು ಹೆಸರಿಸಿ.

47. ಇತ್ತೀಚಿನ ದಿನಗಳಲ್ಲಿ ಸ್ತ್ರೀಪುರುಷರ ನಡುವಿನ ಅನುಪಾತದಲ್ಲಿ ಆಗಿರುವ ವ್ಯತ್ಯಾಸಕ್ಕೆ ಕಾರಣಗಳೇನು ?

48. ಭಾರತದ ಬುಡಕಟ್ಟು ಮಹಿಳೆಯರ ಪ್ರಮುಖ ಸಮಸ್ಯೆಗಳಾವುವು ?

49. ಸ್ವಾತಂತ್ರ್ಯಾನಂತರ ಭಾರತದಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗೆ, ನೀತಿಗಳನ್ನು ರೂಪಿಸಿದ ನಾಯಕರನ್ನು ಹೆಸರಿಸಿ.

50. ಭಾರತೀಯ ವಿವಾಹ ವ್ಯವಸ್ಥೆಯ ಮೇಲೆ ಸಮೂಹ ಮಾಧ್ಯಮಗಳ ಪ್ರಭಾವವೇನು ?

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $6 \times 3 = 18$**

51. ತಂತ್ರಜ್ಞಾನದಲ್ಲಿ ಪ್ರಗತಿಯಾದಂತೆ ಸಮಾಜದಲ್ಲಿ ಆಗುವ ಬದಲಾವಣೆಗಳೇನು ?

52. ಸಾಮಾಜಿಕ ಬದಲಾವಣೆಗೆ ಜಾತಿ ಹೇಗೆ ಅಡ್ಡಿಯಾಗಿದೆ ವಿವರಿಸಿ.

53. ಬೌದ್ಧರ ಕಾಲದಲ್ಲಿದ್ದ ಸ್ತ್ರೀಯರ ಸ್ಥಾನಮಾನ ಕುರಿತು ಬರೆಯಿರಿ.

54. 19 ನೆ ಮತ್ತು 20 ನೆ ಶತಮಾನದ ಭಾರತೀಯ ಮಹಿಳೆಯ ಸ್ಥಾನಮಾನದ ಬಗ್ಗೆ ಬರೆಯಿರಿ.

55. ಭಾರತದ ಬುಡಕಟ್ಟು ಜನಾಂಗಗಳ ಐತಿಹಾಸಿಕ ಹಿನ್ನೆಲೆಯ ಬಗ್ಗೆ ಬರೆಯಿರಿ.

56. ಚಲನಚಿತ್ರಗಳು ಸಾಮಾಜಿಕ ಮೌಲ್ಯಗಳನ್ನು ಹೇಗೆ ಪ್ರತಿಬಿಂಬಿಸುತ್ತವೆ ?

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $1 \times 4 = 4$**

57. ಸಾಮಾಜಿಕ ಬದಲಾವಣೆಯ ಲಕ್ಷಣಗಳೇನು ?